## ಐರಿನಾ ಶುವಾಲೊವಾ ಸಂದರ್ಶನ

◆ **ನಿಮ್ಮ ಬಾಲ್ಯದ ಪರಿಸರ, ಕುಟುಂಬ ಮತ್ತು ಶೈಕ್ಷಣಿಕ ದಿನಗಳ ನೆನಪುಗಳನ್ನು ಹಂಚಿಕೊಳ್ಳಿ.**

ಉಕ್ರೇನಿನ ರಾಜಧಾನಿ ಕೀವ್‌ನ ಒಂದು ಬಡ ಕಾರ್ಮಿಕ ಕುಟುಂಬದಲ್ಲಿ ನಾನು ಬೆಳೆದದ್ದು. ನಾನಿನ್ನೂ ಚಿಕ್ಕವಳಿದ್ದಾಗಲೇ ಅಪ್ಪಅಮ್ಮ ವಿಚ್ಛೇದಿತರಾಗಿದ್ದರು. ಬಹುವಾಗಿ ಪ್ರೀತಿಸುವ ಅಮ್ಮ ಮತ್ತು ಅಜ್ಜ, ಅಜ್ಜಿಯ ಪೋಷಣೆಯಲ್ಲಿ ನಾನು ಬೆಳೆದೆ. ನನ್ನಮ್ಮನ ಹೆತ್ತವರಿಗೆ ಧನ್ಯವಾದ ಹೇಳಲೇಬೇಕು. ನಮಗಾಗಿ ಅವರು ಹಳ್ಳಿಯಿಂದ ಪಟ್ಟಣಕ್ಕೆ ಬಂದು ನೆಲೆಸಿದ್ದರಿಂದ, ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ಪಟ್ಟಣದಲ್ಲಿದ್ದರೂ ಹಳ್ಳಿಗಾಡು ಮತ್ತು ಪ್ರಕೃತಿಯ ಜೊತೆಗೆ ಬಲವಾದ ನಂಟು ಉಳಿಸಿಕೊಳ್ಳಲು ನನಗೆ ಸಾಧ್ಯವಾಯಿತು. ಪ್ರತೀ ಬೇಸಿಗೆಯಲ್ಲೂ ಕೀವ್ ಪ್ರಾಂತ್ಯದಲ್ಲಿರುವ ನನ್ನಜ್ಜನ ಹಳ್ಳಿಯಲ್ಲಿ ಕೆಲವು ತಿಂಗಳುಗಳನ್ನಾದರೂ ನಾನು ಕಳೆಯುತ್ತಿದ್ದೆ. ಅಲ್ಲಿ ಅವರ ಹಳೆಯ ಸಾಂಪ್ರದಾಯಿಕ ಮಣ್ಣಿನ (ಉಕ್ರೇನ್‌ನಲ್ಲಿ 'ಖಾಟಾ' ಎನ್ನುತ್ತಾರೆ) ಮನೆಯ ಸುತ್ತ ಬೆಳೆದ ದೊಡ್ಡದೊಡ್ಡ ಹಣ್ಣಿನ ಮರಗಳು ಮತ್ತು ಮುತ್ತಜ್ಜ ತೋಡಿದ ಬಾವಿಯೊಂದು ಇತ್ತು. ಶಾಲೆಯಲ್ಲಿ ನಾನು ಒಳ್ಳೆಯ ವಿದ್ಯಾರ್ಥಿನಿಯಾಗಿದ್ದೆ. ಕಲಿಕೆ ನನಗೆ ಅತ್ಯಂತ ಸುಲಭವಾಗಿತ್ತು. ಮತ್ತೆ ಎಲ್ಲಾ ಥರದ ಸ್ಪರ್ಧೆಗಳಲ್ಲಿ ಅದರಲ್ಲೂ ಭಾಷೆ ಮತ್ತು ಸಾಹಿತ್ಯಕ್ಕೆ ಸಂಬಂಧಿಸಿದವುಗಳಲ್ಲಿ ನಾನು ತಪ್ಪದೇ ಭಾಗವಹಿಸುತ್ತಿದ್ದೆ. ಇಂತಹ ಒಂದು ರಾಷ್ಟ್ರೀಯಮಟ್ಟದ ಸ್ಪರ್ಧೆಯಲ್ಲಿ ಗೆದ್ದಿದ್ದ ಕಾರಣಕ್ಕಾಗಿ ಯುನಿವರ್ಸಿಟಿಗೆ ನನಗೆ ನೇರ ಮತ್ತು ವಿಶೇಷ ಪ್ರವೇಶಾತಿ ದೊರೆತಿತ್ತು. ಮತ್ತೆ ನಾನು ಫಿಲಾಸಫಿಯನ್ನು ಐಚ್ಛಿಕ ವಿಷಯವಾಗಿ ಆಯ್ದುಕೊಂಡೆ. ಈ ವಿಷಯವನ್ನು ಆರಿಸಿಕೊಂಡದ್ದಕ್ಕೆ ಎಲ್ಲರೂ ನನ್ನನ್ನು ಹುಚ್ಚಳಂತೆ ನೋಡಿದರು.

ಫಿಲಾಸಫಿಯನ್ನು ನಾನು ಅಪಾರವಾಗಿ ಆನಂದಿಸುತ್ತಿದ್ದೆ. ಇದು ಲೇಖಕಿಯಾಗಿ ನನ್ನ ಬೆಳವಣಿಗೆಗೂ ಪ್ರೇರಣೆಯಾಯಿತು. ನಾನು ಫಿಲಾಸಫಿಯಲ್ಲಿ ಉನ್ನತ ವ್ಯಾಸಂಗವನ್ನೂ ಮುಗಿಸಿದೆ. ನಂತರ USನಲ್ಲಿ Comparative Literatureನಲ್ಲಿ ಮತ್ತೊಂದು ಮಾಸ್ಟರ್ ಡಿಗ್ರಿ ಮುಗಿಸಿ UKನಲ್ಲಿ Slavic Studies ಮೇಲೆ Ph.D ಕೂಡ ಮಾಡಿದೆ.

◆ **ನಿಮ್ಮ ಶಾಲಾ ಜೀವನದ ಒಂದೆರಡು ತುಂಟ ಘಟನೆಗಳನ್ನು ಹಂಚಿಕೊಳ್ಳಬಹುದಾ?**

ನಾನು ಕೇವಲ ಆದರ್ಶ ವಿದ್ಯಾರ್ಥಿನಿಯಾಗಿರಲಿಲ್ಲ. ಟೀನೇಜ್‌ನಲ್ಲಿ ಪರ್ಯಾಯ ಸಂಗೀತ ಮತ್ತು Youth subcultureಗಳಲ್ಲಿ ನನಗೆ ಆಸಕ್ತಿ ಬೆಳೆದಿತ್ತು. ನಾನು ಲೋಹದ ಬ್ಯಾಂಡ್‌ಗಳ ಲೋಗೋಗಳಿರುವ ಟೀ-ಶರ್ಟ್‌ಗಳನ್ನು ಗೋಥ್ ಶೈಲಿಯ ಬಟ್ಟೆಗಳನ್ನು ಧರಿಸಲು ಆರಂಭಿಸಿದೆ. 16 ವರ್ಷದವಳಿದ್ದಾಗಲೇ ಮೊದಲ ಸಲ ಹಚ್ಚೆ ಹಾಕಿಸಿಕೊಂಡು ಕಿವಿಯ ಜೊತೆಗೆ ಕೆಳತುಟಿಯನ್ನು ಕೂಡ ಚುಚ್ಚಿಸಿಕೊಂಡಿದ್ದೆ. ನನ್ನ ತರಗತಿಯ ಶಿಕ್ಷಕರಿಗೆ ಕಷ್ಟಪಟ್ಟು ಓದುವ ಬುದ್ಧಿವಂತೆಯೂ, ಹಾಗೆ ನೋಟ ಮತ್ತು ನಡತೆಯಲ್ಲಿ ಅಸಾಂಪ್ರದಾಯಿಕವಾಗಿ ತನ್ನನ್ನು ತಾನು ಅಭಿವ್ಯಕ್ತಿಸಿಕೊಳ್ಳುವವಳೂ ಆಗಿ, ಇಬ್ಬರೂ ಒಬ್ಬಳಲ್ಲೇ ಹೇಗೆ ಇರಲು ಸಾಧ್ಯ ಅಂತ ಅನಿಸುತ್ತಿತ್ತು. ಆದಾಗ್ಯೂ, ನನ್ನ ತಾಯಿ ಯಾವಾಗಲೂ ನನ್ನ ಬೆನ್ನಿಗೆ ನಿಲ್ಲುತ್ತಿದ್ದಳು ಜೊತೆಗೆ ನಾನು ನಾನಾಗಿರೋದಕ್ಕೆ ಅವಕಾಶ ಮಾಡಿ ಕೊಡ್ತಿದ್ಲು.

◆ **ನಿಮ್ಮ ತಾಯಿಯ ವೃತ್ತಿ ಏನಾಗಿತ್ತು? ಅವರ ಬಗ್ಗೆ ಸ್ವಲ್ಪ ಹೇಳಿ? ಈಗ ನೀವು ಏನು ಕೆಲ್ಸ ಮಾಡ್ತಾ ಇದೀರಾ?**

ನನ್ನಮ್ಮನಿಗೆ ಅವಳು ಕನಸು ಕಂಡ ಯಾವ ಕೆಲಸವನ್ನು ಮಾಡೋಕು ಸಾಧ್ಯವಾಗಲೇ ಇಲ್ಲ. ಬಹುಶಃ ಅದಕ್ಕೇ ಇರಬೇಕು ನನ್ನ ಬದುಕಿನಲ್ಲಿ ನನ್ನದೇ ಆದ ಮಾರ್ಗವನ್ನು ಆಯ್ಕೆ ಮಾಡಲು ನನಗೆ ಅವಕಾಶ ನೀಡುವ ಬಗ್ಗೆ ಯಾವಾಗಲೂ ದೃಢವಾಗಿದ್ದರು. ಆಕೆ ಹಗಲು ಕೆಲಸ ಮಾಡಿ, ಸಂಜೆ ತರಗತಿಗಳಿಗೆ ಹಾಜರಾಗಿ ವಿದ್ಯಾಭ್ಯಾಸ ಮುಂದುವರೆಸಿದರು. ಸಾಗರ ಜೀವ ತಜ್ಞೆಯಾಗಬೇಕೆಂದು ಅವಳು ಕನಸು ಕಂಡಿದ್ದರೂ,